## 11

# ತತ್ವಗಳು ಮತ್ತು ನಿಯಮಗಳು ಪರಿಣಾಮಗಳು

ಬೈಬಲ್ ಜೀವನ ಕ್ರಮಕ್ಕೆ ನಿಯಮಗಳನ್ನು ನೀಡುವ ಪುಸ್ತಕವಲ್ಲ (ಅದರ ಕೆಲವು ಭಾಗದಲ್ಲಿ ನಿಯಮಗಳನ್ನು ನೀಡಲಾಗಿದ್ದರೂ), ಆದರೆ ಅದರಲ್ಲಿ ವಿವಿಧವಾದ ಸಾಹಿತ್ಯದ ಶೈಲಿಗಳಿವೆ. ನಾವು ದೇವರ ಅನ್ಯೋನ್ಯತೆಗೆ ಸೇರಬೇಕೆಂಬ ಉದ್ದೇಶದಿಂದ ದೇವರು ಈ ಸಾಹಿತ್ಯದ ಶೈಲಿಯನ್ನು ನಮಗೆ ನೀಡಿರುವನು (ಯೋಹಾನ 17:3; ಇಬ್ರಿಯ 8:10-12). ನಾವು ಆತನ ಸಂಬಂಧದಲ್ಲಿ ಮುಂದುವರಿಯುವಾಗ, ಆತನು ನಮಗಾಗಿ ಇಟ್ಟಿರುವ ಇತರೆ ಗುರಿಗಳನ್ನು ತಿಳಿಯುತ್ತೇವೆ: ನಾವು ಆತನ ಪರಿಶುದ್ಧತೆಯಲ್ಲಿ ಪಾಲುಗಾರರಾಗಿ (ಇಬ್ರಿಯ 12:10) ಆತನ ಮಗನಾದ ಯೇಸುವಿನ ಸಾರೂಪ್ಯಕ್ಕೆ ಪರಿವರ್ತನೆಗೊಳ್ಳ ಬೇಕೆಂದು ಪ್ರಕಟಿಸಿರುವನು (ರೋಮಾಪುರ 8:29; 2 ಕೊರಿಂಥ 3:18; ಕೊಲೊಸ್ಸೆ 1:15).

ಬೈಬಲಿನಲ್ಲಿ ದೇವರು ಜನರೊಂದಿಗೆ ಬೆರೆತಿರುವ ಕಾರ್ಯವು, ದೇವರು ಮನುಷ್ಯರಿಗೆ ಒದಗಿಸುವ ಮತ್ತು ಬಯಸುವ ವಿಷಯಗಳನ್ನು ಕಲಿಯಬಹುದಾಗಿದೆ. ಹಾಗೂ ನಮ್ಮ ಬಗ್ಗೆ ಕಲಿತುಕೊಳ್ಳುವ: ದೇವರು ನಮಗೆ ನೀಡಿರುವ ಸಾಮರ್ಥ್ಯದ ಕುರಿತು ಆತನ ಸಂಬಂಧದಲ್ಲಿ ಸೇರಿಕೊಳ್ಳುವ ವಿಷಯಗಳನ್ನು ಕಲಿತುಕೊಳ್ಳಲು ಸಹಾಯಿಸುತ್ತದೆ. ಈ ಸಾಮರ್ಥ್ಯವನ್ನು ನಮ್ಮ ಅಭ್ಯಾಸಕ್ಕೆ ಒಳಪಡಿಸಿಕೊಂಡರೆ, ಇದರಲ್ಲಿ ದೇವರ ವಿವೇಕವನ್ನು ಗ್ರಹಿಸಿಕೊಂಡು, ಆತನ ತತ್ವಗಳ ಮೂಲಕವಾಗಿ ತಿಳಿದು ವಿಸ್ತಾರವಾದ ವಿಷಯಗಳಿಗೆ ಅನ್ವಯಿಸಿಕೊಳ್ಳಬಹುದು, ಆ ಪ್ರಕಟಿತಗೊಂಡ, ತತ್ವಗಳನ್ನು ಯಾವ ಮಟ್ಟದವರೆಗೆ ತಿಳಿಯಬಹುದು?

### ತತ್ವ ಮತ್ತು ನಿಯಮಗಳು

ಮನುಷ್ಯನಿಗೆ ಒದಗಬಹುದಾದ ಸಂದರ್ಭ, ಸ್ಥಳ, ಹಾಗೂ ಪರಿಸ್ಥಿತಿಗಳಿಗೆ ಅನುಗುಣ ವಾಗಿ ಅನುಕೂಲವಾಗುವಂಥ ನೇರವಾದ ನಿಯಮಗಳು ಬೈಬಲಿನಲ್ಲಿ ಇರುವದಿಲ್ಲ, ಮತ್ತು ಇದು ಆಶ್ಚರ್ಯವು ಆಗಿರುವದಿಲ್ಲ. ಈ ಎಲ್ಲಾ ಕ್ಷೇತ್ರಗಳಲ್ಲಿ ಸತ್ಯವೇದವು ಮಾರ್ಗದರ್ಶನವಾ ಗಿದೆಯೇ ಎಂಬ ಅನುಮಾನವು ಇರುತ್ತದೆ. ಕೊಲೊಸ್ಸೆ 3:17ರ ಪ್ರಕಾರ, ಇದು ಪ್ರಾಮುಖ್ಯ ವಾದ ಪ್ರಶ್ನೆಯಾಗಿರುತ್ತದೆ. ಅದರಲ್ಲಿ, ನಾವು ಎಲ್ಲವನ್ನು ಕ್ರಿಸ್ತನ ಹೆಸರಿನಲ್ಲಿ ಅಥವಾ ಆತನ ಅಧಿಕಾರದಿಂದ ಮಾಡಬೇಕು ಎಂದು ಹೇಳಲಾಗಿದೆ. ಎಲ್ಲವನ್ನು ಒಳಗೊಂಡಿರುವ ನಿಯಮಗಳ ಪಟ್ಟಿಯು ನಮ್ಮಲ್ಲಿ ಇಲ್ಲದೆ ಇರುವದರಿಂದ, ಪೌಲನಲ್ಲಿ ಹೆಚ್ಚು ಮಾಹಿತಿ[1] ಇರಲಿಲ್ಲ ಎಂಬ ಅರ್ಥವೇ? ಜೀವನದ ಕೆಲವು ಕ್ಷೇತ್ರಗಳಲ್ಲಿ ಪೌಲನ ಅಧಿಕಾರವಿದೆಯೇ? ಈ ಪಾಠಗಳಲ್ಲಿ, ನಿಯಮಗಳಲ್ಲಿ ದೇವರು ನೀಡಿರುವ ತನ್ನ ಚಿತ್ತವನ್ನು ಸವಿಸ್ತಾರವಾಗಿ ಅಭ್ಯಾಸಿ ಸೋಣ - ಸಂದರ್ಭಕ್ಕನುಗುಣವಾಗಿ ನಿಯಮಗಳನ್ನು ಹೊಂದುವದಕ್ಕಿಂತಲೂ, ವಿವೇಕವುಳ್ಳ ವಿಸ್ತರಣೆಯನ್ನು ನೋಡೋಣ.

ಬಹಶಃ ಈ ಕೆಳಕಂಡ ದೃಷ್ಟಾಂತದಿಂದ ಈ ಅಂಶವನ್ನು ತಿಳಿದುಕೊಳ್ಳಬಹುದು. ಕಾರನ್ನು ಚಲಿಸಲು ಸಹಾಯ ಮಾಡಬಹುದಾದ ದೇವರ ವಾಕ್ಯದ ಕುರಿತು ಯೋಚಿಸಿ. ಕಾರಿನ ಬಗ್ಗೆ ಬೈಬಲ್ ನೇರವಾಗಿ ಏನನ್ನು ಹೇಳುವದಿಲ್ಲ. ಯಾಕಂದರೆ, 1,900 ವರ್ಷಗಳ ಹಿಂದೆಯೇ, ದೇವರ ಬರವಣಿಗೆಯು ಬರೆಯಲ್ಪಟ್ಟು ಅಂತ್ಯಗೊಂಡಿದೆ, ಆದುದರಿಂದ ಈ ನವೀನ ಮಾದರಿಯ ವಾಹನಗಳ ಬಗ್ಗೆ ಅದರಲ್ಲಿ ಯಾವ ಮಾಹಿತಿಯು ದೊರಕುವದಿಲ್ಲ, ಮತ್ತು ಅದನ್ನು ನಾವು ಹೇಗೆ ಉಪಯೋಗಿಸಬೇಕೆಂಬ ಮಾರ್ಗದರ್ಶನವನ್ನು ದೇವರು ನೀಡಿರುವದಿಲ್ಲ? ಈ ನಿಮಿತ್ತ ಕಾರಿನ ಚಾಲನೆಯಲ್ಲಿ ನಮಗೆ ಮನಬಂದಂತೆ ಮಾಡಬಹುದೇ,

ಈ ಪ್ರಶ್ನೆಗೆ ಯೇಸುವಿನ ಅಧಿಕಾರವನ್ನು ನಿರ್ಲಕ್ಷಿಸಬಹುದೇ?

"ಇಲ್ಲ" ಎಂಬುದೆ ಚಿಕ್ಕ ಉತ್ತರವಾಗಿದೆ. ಹೇಗೂ ದೇವರನ್ನೂ ಮೆಚ್ಚಿಸ ಬೇಕಾದರೆ, ಕಾರಿನ ಚಾಲನೆಯ ಬಗ್ಗೆ ಕೆಲವು ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಇತರರನ್ನು ಗೌರವಿಸುವಲ್ಲಿಯೂ ಸರ್ಕಾರದ ನೀತಿ ನಿಯಮಗಳನ್ನು ಪಾಲಿಸುವದರಲ್ಲಿಯೂ, ಚಾಲನಾ ನಿಯಮ ಪಾಲಿಸುವದರಲ್ಲಿಯೂ ಮತ್ತು ವೇದದ ನಿಯಮಗಳ ನಡುವೆಗೊಂದಲ ಉಂಟಾಗುತ್ತದೆ. ಈ ಗೊಂದಲಗಳಲ್ಲಿ, ಹೇಗೆ ಕ್ರಿಸ್ತನ ನಿಯಮಗಳು ಪ್ರಯೋಜವಾಗುತ್ತದೆ ಎಂದು ಅರಿಯಲು, ಬೈಬಲಿನಲ್ಲಿ ನೀಡಿರುವ ತೊಡಗಿಸಿಕೊಳ್ಳಬಹುದಾದ ನಿಯಮಗಳನ್ನು ಗಮನಿಸಬೇಕು. ಅದರಲ್ಲಿರುವ ತೊಡಗಿಸಿಕೊಳ್ಳುವ ಹಾಗು ಕಲ್ಪನೆಗಳ ಕುರಿತಾದ ತರ್ಕವನ್ನು ಚರ್ಚಿಸೋಣ.[2]

"ಪರಿಣಾಮದ" ಕುರಿತಾಗಿ ಪದ ಸಂಗ್ರಹಣ ಪುಸ್ತಕವು ಇದನ್ನು ಎರಡು ವ್ಯಾಖ್ಯಾನದ ಒಂದು ಪದ, "ಮೊದಲನೆಯ ಪದ ತಪ್ಪು, ಎರಡನೆಯ ಪದ ಸರಿ"[3] ಎಂಬ ಅರ್ಥವನ್ನು ನೀಡುತ್ತದೆ ತತ್ವದ ಪುಸ್ತಕವು ವಿಸ್ತಾರವಾದ ವಿವರಣೆಯನ್ನು ನೀಡುತ್ತದೆ:

> ವಾಗ್ವಾದದ ಹಿಂದಿನ ಪದವು, ಅದರ ನಿರ್ಣಯವನ್ನು ಮಾಡುತ್ತದೆ, ಅಂದರೆ ವಾಗ್ವಾದವು ವಜಗೊಂಡಿರುವ ವಾಗ್ವಾದವಾಗಿದೆ. ಸಾಮಾನ್ಯವಾಗಿ ಹೇಳುವುದಾದರೆ, ವಾಕ್ಯ ಅಥವಾ ವಾಖ್ಯದ ಗುಂಪುಗಳು ಇನ್ನೊಂದು ವಾಖ್ಯ ದ ಅರ್ಥವನ್ನು ನೀಡುತ್ತವೆ, ಅದರ ಹಿಂದಿನ ವಾಖ್ಯ ಸರಿಯಾಗಿದ್ದರೆ, ಮುಂದಿನ ವಾಖ್ಯವು ಸಹ ಸತ್ಯವೇ ಆಗಿರಬೇಕು. ಅದರ ಹಿಂದಿನ ವಾಖ್ಯಗಳು ಮುಂದಿನದದನ್ನು ವಜ ಮಾಡುತ್ತದೆ ಎಂದು ಹೇಳುತ್ತಿರುವದಿಲ್ಲ. ಇದು ಇಂಗ್ಲೀಷ್ ಭಾಷೆಯಲ್ಲಿ ಸರಿಯಾಗಿರುವದಿಲ್ಲ. ಪರಿಣಾಮಗಳು ತರ್ಕದ ಸಂಬಂಧವನ್ನು ಹಿಡಿದಿಟ್ಟು ಕೊಳ್ಳುತ್ತದೆ, ಒಂದು ವಾಖ್ಯದಿಂದ ಮುಂದೆ ಹೋಗುವಾಗ, ಜನರು ಕಲ್ಪನೆಗಳನ್ನು ಮಾಡಿಕೊಳ್ಳುತ್ತಾರೆ.[4]

ಕೆಲವು ಉದಾಹರಣೆಗಳ ಮೂಲಕ ಇದರ ಪ್ರಾಯೋಗಿಕ ಅರ್ಥವನ್ನು ಉತ್ತಮ ವಾಗಿ ಅರ್ಥ ಮಾಡಿಕೊಳ್ಳೋಣ. ನನ್ನ ಕಿಸೆಯಲ್ಲಿ ಒಂದೇ ಬೆಲೆಯ ಮೂರು ಅಮೇರಿಕದ ನಾಣ್ಯಗಳಿವೆ ಅವು ಒಟ್ಟು ಎಪ್ಪತ್ತ - ಐದು ಸೆಂಟ್ಸ್ ಎಂದು ಹೇಳಿರುತ್ತೇನೆ. ನಿಮಗೆ ಅಮೇರಿಕದ ನಾಣ್ಯದ ಮಾಹಿತಿ ಇದ್ದರೆ, ಆ ಮೂರು ನಾಣ್ಯಗಳು ಸಮವಾದ ಕಾಲು ಭಾಗವಾಗಿರುತ್ತದೆ. ಹೇಗೂ, ಆ ಅಮೇರಿಕದ ನಾಣ್ಯದ ಬೆಲೆಯನ್ನು ಅರಿಯದೆ ಇರುವುದು ಸಮಸ್ಯೆಯಾಗುತ್ತದೆ, ವಿನಃ ತರ್ಕವಲ್ಲ. ಪರಿಣಾಮದ ಕುರಿತಾದ ಸತ್ಯವು ಇದೇ ರೀತಿ ಇರುತ್ತದೆ. ಒಂದು ವೇಳೆ ಅಮೇರಿಕದ ನಾಣ್ಯದ ಪರಿಜ್ಞಾನ ಇರಲಿ ಅಥವಾ ಇಲ್ಲದಿರಲಿ. ಸತ್ಯದ ಬಗ್ಗೆ ಇರುವ ಸತ್ಯವು ಇದೆ ರೀತಿ ಇರುತ್ತದೆ. ಯಾವುದಾದರು ಸತ್ಯವಾಗಿದ್ದರೆ, ನಮಗೆ ಅರ್ಥವಾದರೂ ಸರಿಯೇ ಅರ್ಥವಾಗದಿದ್ದರೂ ಸರಿಯೇ. ಅದನ್ನು ಒಪ್ಪಬಹುದು ಅಥವಾ ಒಪ್ಪದೆ ಇರಬಹುದು. ಅದು ಸತ್ಯ ಸತ್ಯವೇ.

ಇನ್ನೊಂದು ಉದಾಹರಣೆಯನ್ನು ನೀಡುತ್ತೇನೆ. ನಾನು ಮತ್ತು ನೀನು ಒಂದು ಗೋಡೆಯನ್ನು ಕಟ್ಟುತ್ತಿರಬಹುದು, ನಾವು ಅದರ ಅಡಿಪಾಯವನ್ನು ಹಾಕುವಾಗ, ಅದರ ಅಳತೆಯು ಸರಿಯಾಗಿ ಹದಿಮೂರು ಅಡಿ ಉದ್ದವಿರಬೇಕೆಂದು ನಿರ್ಣಯಿಸಿರು ತ್ತೇವೆ, ಆದರೆ ಅದರ ಅಡಿಪಾಯಕ್ಕೆ ನಾವು ಆರಿಸಿಕೊಂಡಿರುವ ವಸ್ತುವು ಸರಿಯಾಗಿ ಎಂಟು ಅಡಿಗಳು ಮಾತ್ರವಿದೆ. ಉಳಿದ ಭಾಗವನ್ನು ತುಂಬಲು ಅದಕ್ಕೆ ತಕ್ಕ ಅಳತೆಯ ತುಂಡನ್ನು ಕತ್ತರಿಸುವುದು ಸಹಜವಾದದ್ದೆ. ಅದು ಎಷ್ಟು ಉದ್ದವಿರಬೇಕು? ನಾವು ಆ ಸ್ಥಳವನ್ನು ಅಳತೆ ಮಾಡಬಹುದು, ಆದರೆ ಅದರ ಅಗತ್ಯತೆ ಇರುವದಿಲ್ಲ. ಲೆಕ್ಕಾಚಾರದ ಪ್ರಕಾರ (ಸರಳ ಲೆಕ್ಕ) ಐದು ಅಡಿ ಉದ್ದದ ವಸ್ತುವಿನ ಅವಶ್ಯವಿದೆ ಎಂದು ತಿಳಿಯುತ್ತೇವೆ ನಾವು ಅದರ ಸ್ಥಳವನ್ನು ಅಳತೆ ಮಾಡಬಹುದು (ಹೆಚ್ಚಿನ ತಿಳುವಳಿಕೆ), ಅಥವಾ ನಮ್ಮ

ಮನಸ್ಸಿನ ಲೆಕ್ಕದಲ್ಲಿ (ಸರಳ ತಿಳುವಳಿಕೆ) ಅದರ ಉದ್ದವನ್ನೂ ಪರಿಗ್ರಹಿಸಬಹುದು, ಸತ್ಯದ ಕುರಿತಾಗಿಯೂ ಇದೇ ತರ್ಕವಾಗಿದೆ.

ಅದರ ಪರಿಣಾಮಗಳಿಂದ ಸತ್ಯವನ್ನು ಕಂಡುಹಿಡಿಯಬಹುದು, ಪರಿಣಾಮಗಳು ಉಂಟಾಗುವಾಗ ಅದು ಏಕೆ ಉಂಟಾಯಿತು ಎಂದು "ಕಾರಣಗಳನ್ನು" ಹುಡುಕುತ್ತೇವೆ.

ಈ ಕಾರ್ಯದಲ್ಲಿ ಒಂದು ಎಚ್ಚರಿಕೆಯ ಮಾತನ್ನು ತಿಳಿಸುತ್ತೇನೆ. ತಿಳುವಳಿಕೆ ಇಲ್ಲದ ಕಾರಣಗಳಿಂದ, ತರ್ಕದ ಮೂಲಕ ವಾಗ್ವಾದವನ್ನು ಗೆದ್ದುಕೊಂಡರೂ, ಅದು ಸತ್ಯವಾಗಿರದೆ ಇರಬಹುದು. ಅದು ಒಂದು ಅಥವಾ ಎರಡು ವಿಧದಲ್ಲಿ ಸಂಭವಿಸಬಹುದು. ವ್ಯಾಖ್ಯಾನಗಳ ಮೂಲಕ ಒಬ್ಬನು ತರ್ಕಬದ್ಧವಾಗಿ ನಿರ್ಣಯವನ್ನು ಮಾಡಬಹುದು, ಅಥವಾ ಅನೇಕ ವ್ಯಾಖ್ಯಾನಗಳು ತಪ್ಪಾಗಿರಬಹುದು. ತಪ್ಪಾದ ವ್ಯಾಖ್ಯಾನಗಳು ಸತ್ಯವಾದ ನಿರ್ಣಯಗಳನ್ನು ನೀಡಲಾರವು. ಸತ್ಯವಾದ ವ್ಯಾಖ್ಯಾನಗಳಿಂದ ತಪ್ಪಾದ ನಿರ್ಣಯಗಳು ಉಂಟಾಗುವದಿಲ್ಲ.[5] ಮತ್ತು ಮುಂದಾಗುವಂಥ ಕಾರ್ಯಗಳು ತರ್ಕಬದ್ಧವಾಗದಿದ್ದರೂ ಸತ್ಯವಾಗಿರುತ್ತದೆ[6] ಉತ್ತಮ ವಾದ ವಾಗ್ವಾದಗಳು ಎರಡು ವಿಧವಾದ ತುದಿಗಳನ್ನು ಹೊಂದಿರಬೇಕು. ಮೊದಲನೆಯದಾಗಿ, ಪ್ರಶ್ನೆಯಲ್ಲಿರುವ ಪ್ರಮೇಯವು ಸತ್ಯವಾಗಿರಬೇಕು. ಎರಡನೆಯದಾಗಿ, ಅದರ ಸಂಬಂಧ ಸರಿಹೊಂದುವಂತ ಪದಗಳ ಜೋಡಣೆ ಇರಬೇಕು - ಇನ್ನೊಂದು ಅರ್ಥದಲ್ಲಿ, ತಪ್ಪಾದ ತರ್ಕವಿರಬಾರದು - ಈ ಎರಡು ವಿಷಯಗಳು ಅಡಕವಾಗಿದ್ದರೆ ಮಾತ್ರ ವಾಗ್ವಾದವು ಸರಿ ಹೊಂದುತ್ತದೆ.

ಕಾರಣ ನೀಡುವ ವಿಷಯದಲ್ಲಿ ತಪ್ಪು ಉಂಟಾಗಬಹುದಾಗಿದ್ದರೂ, ಸತ್ಯವನ್ನು ಸಿದ್ಧಾಂತ ಪಡಿಸುವದಕ್ಕೆ ಕಾರಣಗಳೇ ಕಾರಣವಾಗಬಾರದು. ನೇರವಾಗಿ ಹೇಳಲಾರದ ವಿಷಯಗಳಿಂದ ಸತ್ಯವನ್ನು ಅರಿಯುವಂತೆ, ಎರಡು ಸಾಕ್ಷಿಯ ವ್ಯಾಖ್ಯಾನದಿಂದಲೂ ಅರಿಯಬಹುದು. ಇನ್ನೊಂದು ಅರ್ಥದಲ್ಲಿ, ತರ್ಕವಾದ, ದೃಷ್ಟಿಕೋನದಿಂದ, ಎರಡು ಮಾರ್ಗದಿಂದ ಸತ್ಯವನ್ನು ಅರಿಯಬಹುದು. ಒಂದು ಸರಳವಾದ ಮತ್ತೊಂದು ತೀವ್ರ ಅಧ್ಯಯನದ ಮಾರ್ಗ. ಎರಡಕ್ಕೂ ಸಂಬಂಧವಿದೆ. ಬೈಬಲಿನಲ್ಲಿ ತರ್ಕವನ್ನೆ ಉಪಯೋಗಿಸಲಾಗಿದೆ. ಪ್ರಾಯೋಗಿಕವಾದದ್ದನ್ನು ಮುಂದೆ ನೋಡೋಣ.

## ದೈವಶಾಸ್ತ್ರದ ಸತ್ಯಗಳನ್ನು ಪರಿಣಾಮದ ಮೂಲಕ ಅರಿಯಬಹುದು

ಮೊದಲನೆದಾಗಿ, ಕಾರನ್ನು ಸರಿಯಾಗಿ ಬಳಸುವ ವಿಧವನ್ನು ನೋಡೋಣ, ಅದರ ಚಾಲನೆಯ ಉಪಯೋಗವನ್ನು ತಿಳಿಯುವಾಗ, ಅದರ ವೇಗದ ಬಗ್ಗೆ ಅದಕ್ಕೆ ಉಪಯೋಗಿಸುವ ಪೆಟ್ರೋಲಿನ ಬಗ್ಗೆ, ಮತ್ತು ಅದನ್ನು ಹತೋಟಿಗೆ ತರುವ ಉಪಕರಣಗಳ ಬಗ್ಗೆ, ಸರ್ಕಾರವು ನೀಡಿರುವ ಆದೇಶಗಳ ಕಡೆಗೆ ಗಮನ ಹರಿಸುತ್ತೇವೆ. ಸರ್ಕಾರದ ಆದೇಶವನ್ನು ಕ್ರೈಸ್ತರು ಪಾಲಿಸಬೇಕು ಎಂಬ ನಿಯಮವಿದೆಯೇ? ಹೌದು, ಅದನ್ನು ನಾವು ಮಾಡಲೇ ಬೇಕು. ಹೊಸ ಒಡಂಬಡಿಕೆಯಲ್ಲಿ ಈ ಒಂದು ಹೇಳಿಕೆಯು ಮಾತ್ರ ಇರುವದಿಲ್ಲ. ರೋಮಾಪುರ 13:1-7ರಲ್ಲಿ ಪೌಲನು ಚರ್ಚಿಸಿ ಅಲ್ಲಿ ಎಲ್ಲವು ಒಳಗೊಂಡಿರುತ್ತದೆ. ನಾವು "ಸರ್ಕಾರದ ಅಧೀನತೆಗೆ ಒಳಗಾಗಬೇಕು" ಎಂದು ಅತಿ ಒತ್ತಿ ನೀಡುತ್ತದೆ (ನೇರವಾಗಿ) ಸರ್ಕಾರದ ಅಧಿನಿಯಮಗಳನ್ನು ಪಾಲಿಸಬೇಕು.

ನಾಗರೀಕ ನಿಯಮಗಳ ಕುರಿತು, ಬೈಬಲ್ ಸಾಮಾನ್ಯವಾದ ತಿಳುವಳಿಕೆಯನ್ನು ನೀಡಿರುತ್ತದೆಯೇ? ಹೌದು, ನೀಡಿರುತ್ತದೆ. ಯೆಹೂದ್ಯರು, ರೋಮ ಸರಕಾರಕ್ಕೆ ಸುಂಕವನ್ನು ನೀಡುವ ಬಗ್ಗೆ ಯೇಸು ಕ್ರಿಸ್ತನು ಸೂಚನೆಯನ್ನು ನೀಡಿರುವನು. ಎರಡು ಅತಿರೇಖವಾದ ವಿಷಯವನ್ನು ಯೇಸು ಸುಗಮ ಮಾಡಿದನು.: "ನನಗೆ ಒಂದು ಹಣವನ್ನು ತೋರಿಸಿರಿ. ಇದರಲ್ಲಿ ಯಾರ ತಲೆಯೂ ಮುದ್ರೆಯೂ ಅದೆ ಎಂದು ಕೇಳಿದ್ದಕ್ಕೆ ಅವರು ಕೈಸರನದು ಅಂದರು. ಆತನು ಅವರಿಗೆ - ಹಾಗಾದರೆ ಕೈಸರನದನ್ನು ಕೈಸರನಿಗೆ ಕೊಡಿರಿ, ದೇವರದನ್ನು ದೇವರಿಗೆ

ಕೊಡಿರಿ ಎಂದು ಹೇಳಿದನು" (ಲೂಕ 20:24, 25). ಅಪೊಸ್ತಲರು ಯೇಸುವಿನ ಮಾತನ್ನು ಒಂದು ವೇಳೆ ನೆನಪು ಮಾಡಿರಬಹುದು, ಅಪೊಸ್ತಲರಕೃತ್ಯಗಳು 3-5, ಅವರನ್ನು ಇಸ್ರಾಯೇಲ್ಯರ ಅಧಿಕಾರಿಗಳ ಬಳಿಗೆ ಕರತಂದು, ಯೇಸುವಿನ ಕುರಿತು ಇನ್ನೂ ಮುಂದೆ ಬೋಧಿಸಬಾರದೆಂದು ಅಪ್ಪಣೆ ಮಾಡಲು "ಪೇತ್ರನೂ, ಉಳಿದ ಅಪೋಸ್ತಲರು - ಮನುಷ್ಯರಿಗಿಂತಲೂ ದೇವರಿಗೆ ಹೆಚ್ಚಾಗಿ ವಿಧೇಯರಾಗಬೇಕಲ್ಲ" ಅಂದರು (ಅಪೊಸ್ತಲರಕೃತ್ಯಗಳು 5:29).

ಇದರಲ್ಲಿ ದ್ವಿಮುಖವಾದ ಎರಡು ವ್ಯಾಖ್ಯಾನಗಳಿವೆ. ದೇವ ಜನರು ಸರ್ಕಾರದ ಅಧಿಕಾರಿಗಳಲ್ಲಿ ಗೌರವಯುತವಾಗಿ ವರ್ತಿಸಬೇಕು. ದೇಶದ ಆಜ್ಞೆಯನ್ನು ಪಾಲಿಸುವುದು ಸಾಮಾನ್ಯವಾದ ಕರ್ತವ್ಯವಾಗಿರುತ್ತದೆ, ಆದರೆ ದೇವರ ಚಿತ್ತಕ್ಕೂ ಆತನ ನಿಯಮಾವಳಿಗಳಿಗೂ ಕೊರತೆ ಉಂಟಾಗುವಾಗ ಮಾತ್ರ, ಅವರ ನಿಯಮಗಳನ್ನು ನಿರಾಕರಿಸ, ಬೇಕಾಗುತ್ತದೆ.

ನಾವು ವಾಹನವನ್ನು ಬಳಸುವಲ್ಲಿ, ಈ ನಿಯಮ ಹೇಗೆ ಪ್ರಯೋಜನವಾಗುತ್ತದೆ? ದೇವರ ನಿಯಮಗಳಿಗೆ ವ್ಯತಿರಿಕ್ತವಾಗಿರದ ಸಕಲ ಸರ್ಕಾರಿ ನಿಯಮಗಳನ್ನು ನಾವು ಪಾಲಿಸಲೇ ಬೇಕು. ವಾಹನ ಚಾಲನೆಯ ಕುರಿತು ಸರ್ಕಾರದ ನಿಯಮಗಳಿದ್ದರೆ, ಅದನ್ನು ನಮ್ಮ ದೇಶದ ನಿಯಮವೆಂದು ತಿಳಿದು ಗೌರವಿಸಬೇಕು. ದೇವರ ಸ್ವಭಾವಕ್ಕೂ ಮತ್ತು ಆತನ ಚಿತ್ತಕ್ಕೂ ವಿರುದ್ಧವಾದ ನಿಯಮಗಳನ್ನು ನಿರಾಕರಿಸಬೇಕು. ಹೃದಯ ಘಾತವಾದ ಮನುಷ್ಯನನ್ನು ಬೇಗನೆ ಚಿಕಿತ್ಸೆಗೆ ಕೊಂಡೊಯ್ಯಲು, ವೇಗವಾಗಿ ಚಲಿಸುವಲ್ಲಿ ಸಾಮಾನ್ಯ ನಿಯಮವನ್ನು ಪಾಲಿಸುವಲ್ಲಿ, ಆಯ್ಕೆಗೆ ಅವಕಾಶವಿರುತ್ತದೆ.[7]

ಈ ವಿಷಯಗಳನ್ನು ಹೇಗೆ ಕಲಿಯೋಣ? ಪರಿಶೀಲನೆಯಿಂದ ಕಲಿಯಬಹುದು. ಬಹಳ ನಿರ್ದಿಷ್ಟವಾಗಿ, ಉಂಟಾಗುವ ಪರಿಣಾಮದ ನಿಮಿತ್ತ ಎಲ್ಲಾ ನಿಯಮಗಳನ್ನು ಪಾಲಿಸಬೆಕು. ದೇವರ ನಿಯಮಗಳಿಗೆ ಬಾಹಿರವಾದದ್ದನ್ನು ನಿರಾಕರಿಸಬೇಕು.

ಈ ವಿಧದಲ್ಲಿ ನಾವು ಈ ವ್ಯಾಖ್ಯಾನಗಳನ್ನು ಒಪ್ಪಿಕೊಳ್ಳುತ್ತೇವೆ. ಉದಾಹರಣೆಗೆ, ಯೇಸು ಬೆತ್ಲೆಹೇಮಿನಲ್ಲಿ ಜನಿಸಿದ್ದನು (ಮತ್ತಾಯ 2:1-16; ಲೂಕ 2:4-12), ಇತರೆ ಸೂಚನೆಗಳಿಂದ ಮರಿಯಳು ಬೇರೆ ಮಕ್ಕಳನ್ನು ಪಡೆದಿದ್ದಳು ಎಂದು ತಿಳಿಯುತ್ತೇವೆ. ಮರಿಯಳು ಯೇಸುವಿನ ತಾಯಿ ಎಂದು ತಿಳಿದಿರುವೆವು (ಮತ್ತಾಯ 1:16; 2:11), ಯೇಸುವಿನ ಸಹೋದರ, ಸಹೋದರಿಯರ ಕುರಿತು ವಾಕ್ಯಗಳಿವೆ (ಮತ್ತಾಯ 13:55, 56). ಈ ಸೂಚನೆಗಳಿಂದ ಯೇಸು ಮರಿಯಳಲ್ಲಿ ಜನಿಸಿದ್ದಳು ಎಂದು ತಿಳಿಯುತ್ತೇವೆ.

ಕೆಲವು ಸೈದ್ಧಾಂತಿಕ ಸತ್ಯಗಳನ್ನು ನಾವು ಇದೇ ರೀತಿ ತಿಳಿಯುತ್ತೇವೆ. ಉದಾಹರಣೆಗೆ, ಡೇವಿಡ್ ಆ್ಯಂಗ್ವಿಷ್ ತನ್ನ ಪಾಪಕ್ಕಾಗಿ ಪಶ್ಚಾತ್ತಾಪ ಪಡಬೇಕು ಎಂದು ನಿರ್ದಿಷ್ಟವಾಗಿ ಬೈಬಲಿನಲ್ಲಿ ಎಲ್ಲಿಯೂ ದಾಖಲಾಗಿರುವದಿಲ್ಲ. ಹೇಗೂ, ಅಪೊಸ್ತಲರಕೃತ್ಯಗಳು 17:30ರಲ್ಲಿ ನಿರ್ದಿಷ್ಟವಾದ ವಾಕ್ಯವಿದೆ, ಈಗಲಾದರೋ ಆತನು "ನಾಲ್ಕು ದಿಕ್ಕಿನಲ್ಲಿರುವ ಮನುಷ್ಯರೆಲ್ಲರೂ ತನ್ನ ಕಡಗೆ ತಿರುಗಿಕೊಳ್ಳಬೇಕೆಂದು ಅಪ್ಪಣೆ ಕೊಡುತ್ತಾನೆ" ಡೇವಿಡ್ ಆ್ಯಂಗ್ವಿಷ್ ಈ ಗುಂಪಿಗೆ ಸೇರಿದವನು. "ನಾಲ್ಕು ದಿಕ್ಕಿನ ಜನರಲ್ಲಿ ಸೇರಿದವನು," ಇದರಿಂದ ಡೇವಿಡ್ ಆ್ಯಂಗ್ವಿಷ್ ಮಾನಸಾಂತರ ಪಡಬೇಕು ಎಂಬ ತಿಳುವಳಿಕೆಯನ್ನು ನಾವು ಪಡೆಯುತ್ತೇವೆ.

ದೇವರು ಒಂದೇ ಒಂದು ಸಭೆಯನ್ನು ಉಂಟು ಮಾಡಿರುವುದು ಸಹ ಸೂಚನೆಗೆ, ಮಾದರಿಯಾಗಿದೆ. ಇದು ಎರಡು ವಿಧದಲ್ಲಿ ಅರ್ಥವನ್ನು ನೀಡುತ್ತದೆ. "ಸಭೆ" ಎಂಬುದಕ್ಕೆ ಅನೇಕ ವಾಕ್ಯಗಳಿವೆ (1 ಕೊರಿಂಥ 12:28; ಗಲಾತ್ಯ 1:13; ಎಫೆಸ 1:22). ಯೇಸು ತನ್ನ "ಸಭೆ"ಯನ್ನು ಕಟ್ಟುವನೆಂದು ವಾಗ್ದಾನ ಮಾಡಿದನು (ಏಕ; ವಚನ ಮತ್ತಾಯ 16:18). ಈ ವಾಕ್ಯ ಭಾಗದಿಂದ, ಇದು ಒಂದೇ "ಸಭೆಯೆ" ಎಂಬ ಅನುಮಾನ ಉಂಟಾಗುತ್ತದೆ.[8] ಯೇಸು ಎಷ್ಟು ಸಭೆಗಳನ್ನು ಕಟ್ಟಿದನು ಮತ್ತು ಅವುಗಳಲ್ಲಿ ಎಷ್ಟು ಸಭೆಗಳು ಮೊದಲನೇ ಶತಮಾನದಲ್ಲಿ ಇದ್ದವು. ಎಂದು ಸಂದೇಹವಿದೆ. ಎಫೆಸದವರ ಪತ್ರಿಕೆಯಲ್ಲಿ ಪೌಲನು ಎರಡು ವ್ಯಾಖ್ಯಾನವನ್ನು ಮಾಡಿ, ಎಫೆಸ 1:22, 23ರಲ್ಲಿ ಅವನು ಬರೆದು, ಆತನು ಸಮಸ್ತವನ್ನು ಕ್ರಿಸ್ತನ ಪಾದಗಳ ಕೆಳಗೆ

ಹಾಕಿದನು. ಇದಲ್ಲದೆ ಆತನನ್ನು ಎಲ್ಲಾದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು. ಸಭೆಯು ಆತನ ದೇಹವಾಗಿದೆ, ಎಲ್ಲವನ್ನು ಎಲ್ಲಾ ಸಂಬಂಧದಲ್ಲಿ ವ್ಯಾಪಿಸುವಾತನಿಂದ ಅದು ಪರಿಪೂರ್ಣತೆಯುಳ್ಳದ್ದಾಗಿದೆ. ಎಫೆಸ ಸಂಪೂರ್ಣ ಪತ್ರಿಕೆಯಲ್ಲಿ, "ಸಭೆ" ಎಂಬ ಪದಕ್ಕೆ "ದೇಹ" ಎಂದು ವ್ಯಾಖ್ಯಾನಿಸಿದ್ದಾನೆ (ಎಫೆಸ 3:6; 4:12; 16; 5:23, 30). ಎಫೆಸ 2:16 ಮತ್ತು 4:4ರಲ್ಲಿ "ಒಂದೇ ದೇಹ" ಎಂದು ತಿಳಿಸಿದನು. ಅಲ್ಲಿ ಅವನು "ಒಂದೇ ಒಂದು ಸಭೆ" ಎಂದು ತೀವ್ರವಾಗಿ ಹೇಳಿದ್ದಾನೆ? ಇಲ್ಲ, ಒಂದು ವೇಳೆ ಸಭೆ ಮತ್ತು ದೇಹ ಒಂದೇ ಆಗಿರುವುದಾದರೆ, "ಒಂದೇ" ಸಭೆ ಎಂಬ ಸೂಚನೆಯು ಇದಾಗಿರುತ್ತದೆ. ಮುಂದೆ ಎಫೆಸ 5:23ರಲ್ಲಿ, ಕ್ರಿಸ್ತನು "ದೇಹದ ರಕ್ಷಕನು" ಎಂದು ನೋಡುತ್ತೇವೆ. ರಕ್ಷಿತರಲ್ಲಿ ಒಬ್ಬನು ಸೇರಬೇಕಾಗಿದ್ದರೆ, ಅವನು ಒಂದು ಸಭೆಯಲ್ಲಿ ಪಾಲುಗಾರನಾಗಿರಬೇಕು ಎಂಬ ಸೂಚನೆಯಾಗಿದೆ.

## ಮುಕ್ತಾಯ

ಸೂಚನೆಗಳಿಂದಲೂ, ಆಗಿರಬಹುದಾದ ವಿಷಯಗಳಿಂದಲೂ ನಮ್ಮ ಕಾರಣಗಳಿಗೆ ಉತ್ತರವನ್ನು ಪಡೆದಿರುವಂತೆ, ಇದು ಕೆಲವರಿಗೆ ಭಯಾನಕವಾಗಿ ತೋರಬಹುದು. ಈ ಚರ್ಚೆಯ ವೇದಾಭ್ಯಾಸವನ್ನು ಕಠಿಣಪಡಿಸಬಹುದು. ಇಲ್ಲಿ ನಾವುಗಳು, ಸ್ವಾಭಾವಿಕವಾಗಿ ಮಾಡುವ ವಿಷಯಗಳನ್ನೆ ಚರ್ಚಿಸಿದ್ದೇವೆ. ವಿಶ್ವಾಸಿಗಳಾದ ನಾವು ವೇಧಾ ಭ್ಯಾಸವನ್ನು ಅಭ್ಯಾಸ ಮಾಡಿ ಕೊಳ್ಳಬೇಕು, ಅಲಕ್ಷದ ಯೋಚನೆಯನ್ನು ಮಾಡದೆ, ನಾವು ನಂಬಿರುವದನ್ನು ಯೋಚಿಸೋಣ.

ಅದೇ ಸಮಯದಲ್ಲಿ, ದೇವರು ತನ್ನ ಚಿತ್ತವನ್ನು ಪ್ರಕಟಿಸಲು ಆರಿಸಿಕೊಂಡಿರುವ ಮಾರ್ಗವನ್ನು ನಿರಾಕರಿಸದೆ ಇರೋಣ. ನಾವು ಆತನ ಅನ್ಯೋನ್ಯತೆಯನ್ನು ಆಯ್ಕೆ ಮಾಡಬೇಕೆಂದು ದೇವರು ಬಯಸುತ್ತಾನೆ, ನಮ್ಮ ಜೀವಿತದ ವಿವಿಧವಾದ ಸಂದರ್ಭಗಳಿಗೆ ಅನುಕೂಲ ವಾಗುವ ನಿಯಮಗಳನ್ನು ದೇವರು ದಯಪಾಲಿಸಿರುವದರಿಂದ, ಆತನ ಚಿತ್ತಕ್ಕೂ ಮತ್ತು ಕ್ರಿಸ್ತನ ಅಧಿಕಾರಕ್ಕೂ ಒಳಪಡೋಣ.

---

ಟಿಪ್ಪಣಿಗಳು

[1]ಬೈಬಲಿನ ಟೀಕಾಕಾರರು ಇದನ್ನು ವಿವಿಧ ರೀತಿಯಲ್ಲಿ ಟೀಕಿಸಿದ್ದಾರೆ. ಬೈಬಲಿನ ಬರವಣಿಗೆಯು ಪೂರ್ವಕಾಲದಲ್ಲಿಯೇ ಮುಗಿದು ಹೋಗಿರುವದರಿಂದ, ಈ ದಿನಗಳಿಗೆ, ಅದು ಅನ್ವಯಿಸುವದಿಲ್ಲವೆಂದು ಹೇಳುವರು ಅದನ್ನು ನಿಯಮದ ಪುಸ್ತಕವೆಂದು ಮಾತ್ರ ತಿಳಿಸಿದ್ದಾರೆ ಇದಕ್ಕೆ ವ್ಯತಿರಿಕ್ತವಾಗಿ, ದೇವರ ಚಿತ್ತವನ್ನು ಒಳಗೊಂಡಿರುವದಿಲ್ಲವೆಂದು ಹೇಳುವರು, ಎಲ್ಲಾ ಸಮಯಕ್ಕೂ, ಸಂದರ್ಭಕ್ಕೂ, ಸ್ಥಳಗಳಿಗೂ ಅನ್ವಹಿಸುವ ನಿಯಮಗಳನ್ನು ಬೈಬಲ್ ಒಳಗೊಂಡಿರುವದರಿಂದ, ಅದನ್ನು ಶ್ಲಾಘಿಸಬೇಕು. [2]ತರ್ಕವು ಸಲ್ಲ ಎಂದು ಕೆಲವರು ಟೀಕಿಸಿದ್ದಾರೆ, ಮುಖ್ಯವಾಗಿ ಸೂಚನೆಗಳ ಕುರಿತಾಗಿ ಸಲ್ಲ. ಕಾರಣಗಳು ತಪ್ಪಾಗಬಹುದಾದ್ದರಿಂದ, ನಮ್ಮವಾದ ಸರಿ ಎಂದು ಹೇಳಲು ಅಸಾಧ್ಯ ಆದುದರಿಂದ ಇತರರು ಸತ್ಯವನ್ನು ಅರಿತಿರುವದಿಲ್ಲ ಎಂದು ಹೇಳಲಾಗದು. ಜನರು ಸರಿಯಾದ ವಾದವನ್ನು ಮಾಡಬಹುದು, ಅದು ಎಲ್ಲಾ ಕಾರಣಗಳನ್ನು ನೀಡಲಾರದು. ಇದು ನನ್ನ ಸವಾಲಾಗಿದೆ. ಕೆಲವರು ವೈಜ್ಞಾನಿಕ ವಾದಗಳು ಮಾತ್ರ ಸರಿಯೆಂದು ಹೇಳುವರು. ನಮ್ಮ ಜ್ಞಾನೇಂದ್ರಿಯದಿಂದ ಅರಿಯಬಹುದು ಎಂಬ ತಿಳುವಳಿಕೆಯನ್ನೂ ಇದು ನೀಡುತ್ತದೆ. ಇದರಲ್ಲಿ ಎರಡು ಅಂಶಗಳಿವೆ (1) ವೈಜ್ಞಾನಿಕವಾದದ್ದು ಕಾರಣಗಳನ್ನು ಹೊಂದಿರುತ್ತದೆ. ವಿಜ್ಞಾನಿಗಳು ಕೆಲವು ವಿಷಯಗಳನ್ನು ನೋಡಿ ತೀರ್ಮಾನ ಮಾಡುತ್ತಾರೆ. ಫೋಟಾನ್ಸ್ ಮತ್ತು ನ್ಯೂಟ್ರಾನ್‌ಗಳ ಇರುವಿಕೆಯು ಇದರಲ್ಲಿದೆ. (2) ನಮ್ಮ ಮನಸ್ಸು ನಮ್ಮನ್ನು ಮೋಸ ಪಡಿಸುತ್ತದೆ. ಪೆನ್ಸಿಲ್ಲನ್ನು ನೀರಿನಲ್ಲಿ ಹಾಕಿದರೆ, ಅದು ಅಲ್ಲಿ ಇರುವದಿಲ್ಲ, ಯಾಕೆ ನಮ್ಮ ಕಣ್ಣು ನಮಗೆ ಮೋಸ ಪಡಿಸಿತು ಎಂದು ತಿಳಿಯುತ್ತೇವೆ - ಆದರೆ ಸತ್ಯವನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಸತ್ಯವನ್ನು ಅರಿಯಲು ಜನರು ನೀಡುವ ಕಾರಣಗಳಿಗೆ ನನ್ನ ಎರಡನೆಯ ಪ್ರತಿಕ್ರಿಯೆ ನಿರ್ಣಯಗಳನ್ನು ಮಾಡಲು ಕಾರಣಗಳನ್ನು ಉಪಯೋಗಿಸುವರು (ನೋಡುವ, ಕೇಳುವ, ಸ್ಪರ್ಷದ ವಾಸನೆಯ ಅಥವಾ ರುಚಿಯ) ಅದರ

ಅನುಭವವಿರುವದಿಲ್ಲ ಉದಾಹರಣೆಗೂ ಮತ್ತು ಕಾರಣಕ್ಕೂ ಅದರ ಸಾಮಾನ್ಯ ನಿರ್ಣಯಕ್ಕೂ ನಿರಾಕರಣೆಯಾಗಬೇಕು ಆಗ ವಾದವು ತನ್ನಲ್ಲೆ ಇರುವದಾಗಿರುತ್ತದೆ. [3]*Random House Webster's College Dictionary,* 2d ed. (1999), s.v. "implication." [4]Stephen F. Barker, *The Elements of Logic*, 2d ed. (New York: McGraw-Hill Book Co., 1965), 24. [5]ಸೂಚನೆಗಳನ್ನು (ಒಳಗೊಂಡ ವಾದಗಳು) ಅದು ಸರಿಯಿದ್ದರೂ, ಸತ್ಯವಿಲ್ಲದೆ ಇರಬಹುದು. ಉದಾಹರಣೆಗೆ, ಹಾರುವ ಎಲ್ಲಾ ಕ್ರಿಮಿಗಳಿಗೂ ರೆಕ್ಕೆಗಳಿವೆ; ಎಲ್ಲಾ ಹಂದಿಗಳು ಹಾರುತ್ತವೆ; ಆದುದರಿಂದ ಎಲ್ಲಾ ಹಂದಿಗಳಿಗೆ ರೆಕ್ಕೆಗಳಿವೆಯೇ ಈ ವಾದದಲ್ಲಿ ಉರುಳಿಲ್ಲ, ಅದರ ಹಿನ್ನೆಲೆಯಲ್ಲಿ ಸತ್ಯವಿಲ್ಲ ಅವನ ನಿರ್ಣಯ ತಪ್ಪಾಗಿರಬಹುದು (ಐಬಿಡ್, 24). [6]ವ್ಯರ್ಥವಾದ ವಾದವು ಸತ್ಯವಾಗಿರಬಹುದು. ಉದಾಹರಣೆಗೆ, ಎಲ್ಲಾ ಪಕ್ಷಿಗಳಿಗೂ, ಕೋಳಿಗಳಿಗೂ ರೆಕ್ಕೆಗಳುಂಟು; ಆದುದರಿಂದ ಎಲ್ಲಾ ಕೋಳಿಗಳು ಪಕ್ಷಿಗಳೇ, ಅದರ ನಿರ್ಣಯ ನಿಜವಾದದ್ದೆವಾದವು ಸುಳ್ಳಾಗಿದೆ. (ಯಾರದರು ಇದರಲ್ಲಿ ಉರುಳಿಲ್ಲ ಎಂದರೆ, ಅವರಿಗೆ ಒಂದು ಕ್ರಮವನ್ನು ತೋರಿಸಬೇಕು, ಅವನಿಗೆ ನಾವು ಇದು ಅನರ್ಥ ಎಂಬುದಾಗಿ ಹೇಳಬೇಕಾರೆ, "ಎಲ್ಲಾ ಪಕ್ಷಿಗಳಿಗೂ ಕಾಲುಗಳಿವೆ ಮತ್ತು ಹಂದಿಗಳಿಗೂ ಕಾಲುಗಳಿವೆ, ಆದದರಿಂದ ಎಲ್ಲಾ ಹಂದಿಗಳು ಪಕ್ಷಿಗಳೇ, ಇದು ನ್ಯಾಯವಾದ, ಅದರ ಹಿನ್ನೆಲೆಯ ನಿಜವಾಗಿರುವದಿಲ್ಲ ಎಂದುತೋರಿಸುತ್ತೇವೆ.) [7]ಕೆಲವು ನಿಯಮಗಳು ಇತರೆ ನಿಯಮಗಳಿಗಿಂತ ಪ್ರಾಮುಖ್ಯವಾದವು. ಸರ್ಕಾರಕ್ಕೆ ವಿದೇಯರಾಗುವದಕ್ಕಿಂತ, ದೇವರಿಗೆ ವಿಧೇಯರಾಗುವುದು ಒಳಿತು. ಜನರಿಗೆ ಒಳಿತಾಗಿ ಕಾಣವು ನಿಯಮಗಳು ಅವರ ದೃಷ್ಟಿಗೆ ಸರಿಯಾಗಿ ಕಾಣಬಹುದು, ಆದರೆ ಇದು ಎಲ್ಲರಿಗೂ ಅರ್ಥವಾಗುವದಿಲ್ಲ. ಜನರ ಒಳಿತಿಗಾಗಿ, ಯೇಸು ಕೆಲವು ನಿಯಮಗಳನ್ನು ಪಾಲಿಸಲಿಲ್ಲ ಎಂದು ಯೇಸುವಿನ ಕಾಲದಲ್ಲಿ ಜನರು ಹೇಳಿದರು (ಉದಾಹರಣೆ ಮಾರ್ಕ 2:13-17, 23-28; 3:1-6). ಸಬ್ಬತ ದಿನದಲ್ಲಿ ಅವರು ಏಕೆ ಕುರಿಯನ್ನು ಗುಂಡಿಯೊಳಗಿಂದ ಎಳೆಯುವರು ಎಂಬ ವಾದವನ್ನು ಯೇಸು ಮಂಡಿಸಿದನು, ಆತನು ಸ್ವಸ್ಥತೆ ನೀಡಿದ್ದಕ್ಕೆ ಟೀಕಿಸಿದರು ಮತ್ತಾಯ 12:9-14). [8]"ಸಭೆ" ಎಂಬ ವ್ಯಾಖ್ಯಾನವು, ನಿರ್ದಿಷ್ಟವಾದ ಪ್ರದೇಶದಲ್ಲಿದ್ದ "ಸಭೆಗೆ" ಸೂಚನೆಯಾಗಿದೆ. (1 ಕೊರಿಂಥ 1:2ನ್ನು ನೋಡಿ) "ಸಭೆಗಳು" ಎಂಬುದಕ್ಕೂ ವಾಕ್ಯಗಳಿವೆ (ಬಹುವಚನ; ಅಪೊಸ್ತಲರಕೃತ್ಯಗಳು 15:41; 16:5; 2 ಕೊರಿಂಥ 8:1; ಗಲಾತ್ಯ 1:2). "ಎಕ್ಲಿಸಿಯಾ" ಎಂಬ ಗ್ರೀಕ್ ಪದವನ್ನು ಹೊಸ ಒಡಂಬಡಿಕೆಯಲ್ಲಿ ದಾಖಲು ಮಾಡಲಾಗಿದೆ, ಅದನ್ನು "ಸಾರ್ವತ್ರಿಕ ಸಭೆ" ಎಂದು ಕರೆಯುತ್ತೇವೆ. ಕೆಲವು ಸಾರಿ ಅವನು "ಹಿಂದು" ಎಂಬುದಾಗಿ ಕರೆಯುತ್ತೇವೆ.